# ಹನಿ ಹನಿಗೂಡಿ..!





ಚಿತ್ರಬರಹ:

**ಪ್ರಸಾದ್ ಶೆಣೈ ಆರ್.ಕೆ.**

ಆಷಾಢದ ಧಾರೆಗೆ ಕೆಂದುಟಿಯ ಮೇಲೆ ಹನಿ ನೀರಿನ ಬಣ್ಣ ಹಚ್ಚುತ್ತಾ, ಮೈ ಮೇಲೆಲ್ಲಾ ಹನಿ ನೀರಿನ ಆಭರಣ ಸುತ್ತಿಕೊಂಡು, ಕಣ್ಣ ಠೇಂಕಿಸುತ್ತಾ, ತಮ್ಮ ಅಸದೃಶ್ಯ ಚೆಲುವನ್ನು ಇನ್ನಷ್ಟು ದೌಲತ್ತಿನಿಂದ ಮೆರೆಸುತ್ತಾ, ನಗುವ ಈ ಮಳೆಗಾಲದ ಹೂವರಾಶಿಯ ಬೆರಗನ್ನು ನೋಡುವ ನಮ್ಮ ಬೊಗಸೆಗಣ್ಣುಗಳಲ್ಲೂ, ಕ್ಯಾಮರಾ ಕಣ್ಣರೆಪ್ಪೆಯಲ್ಲೂ,ಅನಿರ್ವಚನೀಯ ಪುಳಕದ ರಸ ಜಳಕ. ಮಳೆಗಾಲವೆಂದರೆ ಹಾಗೇ– ಹೂವ ಒಡಲಲ್ಲೋ, ಹಸಿರ ಗರಿಗಳ ಕೆನ್ನೆ ಮೇಲೋ ಹುಟ್ಟುವ ಜಿಗ್ ಎನ್ನುವ ಬೆಳ್ಳಿ ಹನಿಗಳನ್ನು ಕಣ್ತುಂಬಿಕೊಳ್ಳುತ್ತಿದ್ದರೆ, ಅಂತರಾಳದಲ್ಲಿ ತಣ್ಣಗಿನ ಭಾವ ಸಮ್ಮೇಳನ.

ಒಮ್ಮೊಮ್ಮೆ ಮೈ ಮೇಲೆ ದೆವ್ವ ಬಂದಂತೆ, ಮತ್ತೊಮ್ಮೆ ಬಿಂದಿಗೆ ಹೊತ್ತ ಚಂದುಳ್ಳಿಯಂತೆ ಬಂದು ಭುಸ್ಸೆಂದು ಅಭಿಷೇಕ ಮಾಡಿಬಿಡುವ ಮಳೆರಾಯನ ಜಾಯಮಾನಕ್ಕೆ, ಪೂರ್ತಿ ಕರಗದೇ ಹಸುರ ಮಿಂಚುಳ್ಳಿಯರು ಆ ಹನಿಯಿಂದ ರಂಗವಲ್ಲಿ ಬರೆದು ತಮ್ಮ ಮೈಗೆ ಮೋಹಕ ಡಿಸೈನ್ ಮಾಡಿಕೊಳ್ಳುತ್ತವೆ. ಮಳೆ ಬಂದು ನಿಂತ ಮೇಲೆ ಕೇಬಲ್ ವೈರುಗಳಿಂದ ತೊಟ್ಟಿಕ್ಕುವ ಹನಿಯನ್ನು ಕೆಳಕ್ಕೆ ಜಾರಿಸಿ ತಮ್ಮ ದೈನಂದಿನ ಕಾಯಕದಲ್ಲಿ ತಲ್ಲೀನರಾಗೋ ಇರುವೆಗಳು, ಈ ಕಾಲದಲ್ಲಿ ಸಂತಾನೋತ್ಪತ್ತಿಗೆ ಅಣಿಯಾಗುತ್ತವೆ. ಪಾದಕ್ಕೊಂದರಂತೆ ಸಿಗೋ ಪಾಚಿ, ಹೂವು, ಹುಲ್ಲ ಗರಿಗಳು ಪ್ರಥಮ ರಾತ್ರಿ ವರನ ಕೋಣೆಗೆ ನಾಚುತ್ತಾ ಪ್ರವೇಶ ಕೊಡುವ ವಧುವಿನ ಹಾಗೆ ಲಜ್ಜೆಯಿಂದ ನಟಿಸೋದು ನೋಡಲು ಬಲು ಸೊಗಸು. ಹೀಗೆ ಹನಿಯೊಂದು ಎದೆಯಲ್ಲಿ ಮೂಡಿಸೋ ಅವ್ಯಕ್ತ ಭಾವ ನೂರೆಂಟು ತರಹ. ಲಿಲ್ಲಿ, ಡೇಲಿಯಾ, ಜಿನಿಯಾ, ಶಂಖದ ಹೂವು ತಮ್ಮ ರೂಪ ಲಾವಣ್ಯದಿಂದ ಸೆಳೆಯೋ ದಿವ್ಯ ಕರಾಮತ್ತಿಗೆ ಮನಸು ಕ್ಲೀನ್ ಬೋಲ್ಡ್!

